# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

**ಸಿಸಿ.ನಂ. 229/2024**

| | | | |
|---|---|---|---|
| **ಸಾಕ್ಷಿದಾರರು** | : | **ಕುಬೇರ** | **ಸಿ.ಡಬ್ಲ್ಯೂ : 1** |
| **ತಂದೆ ಹೆಸರು** | : | **ಕರೀಗೌಡ ಉರುಫ್ ದೊಡ್ಡಕರೀಗೌಡ** | **ಪಿ.ಡಬ್ಲ್ಯೂ : 1** |
| **ವಯಸ್ಸು** | : | **65 ವರ್ಷ** | |
| **ವೃತ್ತಿ** | : | **ವ್ಯವಸಾಯ** | |
| **ವಾಸ ಸ್ಥಳ** | : | **ಗಿರಿಯಾರಹಳ್ಳಿ ಗ್ರಾಮ** | |

**ಸಾಕ್ಷಿಯನ್ನು ದಿಃ 15.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ಅಂತನಹಳ್ಳಿ ಗ್ರಾಮದ ಸರ್ವೆ ನಂಃ 86 ರಲ್ಲಿ ನನ್ನ ತಾಯಿ ಲಕ್ಷ್ಮಮ್ಮ ಮತ್ತು ನನಗೆ 8 ಎಕರೆ ಜಮೀನಿದೆ. ಆ ಜಮೀನಿನಲ್ಲಿ ಅನುಭವದಲ್ಲಿ ನಾವಿದ್ದೇವೆ. ಆ ಜಮೀನಿನಲ್ಲಿ 2005 ರಲ್ಲಿ ನೀಲಗಿರಿ ಮರಗಳನ್ನು ಹಾಕಿದ್ದೆವು. 2022 ರಲ್ಲಿ ನೀಲಗಿರಿ ಮರಗಳನ್ನು ಕಟಾವು ಮಾಡಿದೆವು. ಬೇರುಗಳನ್ನು ಕಿತ್ತು ಬದು ಮಾಡುವ ಸಮಯದಲ್ಲಿ ದಿಃ 02.06.2024 ರಂದು ಮದ್ಯಾಹ್ನ 3.00 ಗಂಟೆ ಸಮಯದಲ್ಲಿ ಜೆ ಸಿ ಬಿ ಆಪರೇಟರ್ ಅಭಿಲಾಷ್ ಮುಲಕ ಬದು ಹಾಕಿಸುತ್ತಿರುವಾಗ 1 ರಿಂದ 8 ನೇ ಆರೋಪಿಗಳು ಎಲ್ಲರು ಗುಂಪುಕಟ್ಟಿಕೊಂಡು ನನ್ನ ಜಮೀನಿನ ಬಳಿ ಬಂದು ಅತಿಕ್ರಮ ಪ್ರವೇಶ ಮಾಡಿ, 1 ನೇ ಆರೋಪಿ ದೊಣ್ಣೆಯಿಂದ

ಹೊಡೆಯಲು ಬಂದರು. ಅವಾಚ್ಯ ಶಬ್ದಗಳಾದ ಬೋಳಿ ಮಗನೇ ಸೂಳೇಮಗನೆ ಎಂದು ಬೈದರು. 2 ನೇ ಆರೋಪಿಯು ಕುಡುಗೋಲನ್ನು ಹಿಡಿದುಕೊಂಡು ಕೊಲೆ ಮಾಡುವುದಾಗಿ ಬೆದರಿಸಿದರು. ಎಲ್ಲಾ ಆರೋಪಿಗಳು ಈ ಜಮೀನು ನಮಗೆ ಬೇಕೆಂದು ಕೊಲೆ ಬೆದರಿಕೆ ಹಾಕಿ ಹೊಡೆಯಲು ಯತ್ನಿಸಿದರು.

2. 3 ರಿಂದ 8 ನೇ ಆರೋಪಿಗಳು ಗುಂಡುಗಳನ್ನು ಹಿಡಿದುಕೊಂಡಿದ್ದರು. 1 ನೇ ಆರೋಪಿ ದೆೊಣ್ಣೆ ಹಿಡಿದುಕೊಂಡಿದ್ದರು. 2 ನೇ ಆರೋಪಿ ಕುಡುಗೋಲನ್ನು ಹಿಡಿದುಕೊಂಡಿದ್ದರು. ಎಲ್ಲಾ ಆರೋಪಿಗಳು ಕೊಲೇ ಮಾಡವುದಾಗಿ ನನ್ನನ್ನು ಬೆದರಿಸಿದರು ಅಷ್ಟರಲ್ಲಿ ಚಾಸಾ.2 ರವರು ಬಂದು ಸಮಾಧನ ಮಾಡಿ ಜಗಳ ಬಿಡಿಸಿದರು. ಆರೋಪಿಗಳು ಹಿಡಿದುಕೊಂಡಿದ್ದ ಆಯುಧಗಳೆಲ್ಲವನ್ನು ಸ್ಥಳದಲ್ಲೆ ಬಿಸಾಡಿ ಹೋದರು.

3. ನಾನು ದಿಃ 16.06.2024 ರಂದು ಪೊಲೀಸರಿಗೆ ದೂರು ನೀಡಿದೆನು. ಸದರಿ ದೂರನ್ನು ಈಗ ನೋಡುತ್ತಿದ್ದು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ನಂತರ ಪೊಲೀಸರು ದಿಃ17.06.2024 ರಂದು ಸ್ಥಳಕ್ಕೆ ಬಂದು ನಾನು ತೋರಿಸಿದ ಕೃತ್ಯ ಸ್ಥಳದಲ್ಲಿ ಮಹಜರು ಮಾಡಿದರು. ಚಾಸಾ.5 ಮತ್ತು 6 ರವರು ಮಹಜರು ಮಾಡುವಾಗ ಇದ್ದರು. ಸದರಿ ಮಹಜರನ್ನು ಈಗ ನೋಡುತ್ತಿದ್ದು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಯಿತು. ಪೋಲಿಸರು

*ಕುಡಗೋಲು ಮತ್ತು ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡರು. ಕೃತ್ಯ ಸ್ಥಳದ ಮಹಜರು ಮಾಡುವಾಗ ಫೋಟೋ ತೆಗೆಸಿದರು. ಆ ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಒಟ್ಟು 2 ಫೋಟೋಗಳನ್ನು ಒಟ್ಟಾಗಿ ನಿಪಿ.3 ಎಂದು ಗುರುತಿಸಲಾಯಿತು.*

***ಈ ಹಂತದಲ್ಲಿ ಮಾನ್ಯ ಸ ಸ ಅ ರವರು ಜಪ್ತಿ ಮಾಡಿದ್ದಾರೆನ್ನುವ ವಸ್ತುಗಳನ್ನು ಹಾಜರು ಪಡಿಸಲು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಿ ಮುಂದೂಡಲಾಯಿತು.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು***
***ಜೆ.ಎಂ.ಎಫ್.ಸಿ., ಪಾಂಡವಪುರ.***